ಸಿ.ಸಿ. ಸಂ. *13/2012*

ಪಿಡಬ್ಲೂಃ *02*

**ಇಂದು ದಿಃ *26.08.2022* ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಃ ಆರೋಪಿತರ ಪರ ಶ್ರೀ. ಸಿ.ಕೆ.ಎಂ. ವಕೀಲರಿಂದಃ**

ಯಾವುದೇ ನೊಂದಾಯಿತ ಸಂಸ್ಥೆಯ ಲೆಕ್ಕ ಪರಿಶೋದನೆ ಮಾಡ ಬೇಕಾದರೆ ಆ ಸಂಸ್ಥೆ ನಮಗೆ ಲಿಖಿತವಾಗಿ ಕೇಳಿಕೊಳ್ಳಬೇಕು ಎಂದರೆ ಸಾಕ್ಷಿಯು ಮೌಖಿಕವಾಗಿ ಕೇಳಬಹುದು ಎಂದು ನುಡಿಯುತ್ತಾರೆ. ನೊಂದಾಯಿತ ಸಂಸ್ಥೆಗಳು ತಮ್ಮ ಲೆಕ್ಕ ಪರಿಶೋಧನೆಯನ್ನು ಯಾವ ಲೆಕ್ಕ ಪರಿಶೋಧಕರಿಂದ ಮಾಡಿಸ ಬೇಕು ಎಂದು ಠರಾವು ಮಾಡುತ್ತಾರೆ ಎಂದರೆ ಸರಿ. *M/s Nagananda Associates and Tax Consultant* ಇವರ ಕಡೆಯಿಂದ ಲೆಕ್ಕ ಪರಿಶೋಧನೆ ಆಗ ಬೇಕು ಎಂಬುದರ ಬಗ್ಗೆ ನಾನು ಯಾವುದೇ ಠರಾವನ್ನು ನೋಡಿಲ್ಲ. ಮಿಳಂದ ವಿಧ್ಯಾಸಂಸ್ಥೆ ಒಂದು ನೊಂದಾಯಿತ ಟ್ರಸ್ಟ್ ಆಗಿದೆ ಎಂದರೆ ಸರಿ. ಸದರಿ ಟ್ರಸ್ಟ್ ಮ್ಯಾನೇಜಿಂಗ್ ಟ್ರಸ್ಟಿ ಗೋವಿಂದಯ್ಯ ಎಂದರೆ ಸರಿ.

ಆರೋಪಿ ಮೈಸೂರಿನ ಮಹಾರಾಣಿ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಕೆಲಸ ಮಾಡಿ ನಿವೃತ್ತ ರಾಗಿದ್ದಾರೆ ಎನ್ನುವುದು ಗೊತ್ತಿಲ್ಲ. ಆರೋಪಿ ಮಿಳಂದ ವಿಧ್ಯಾಸಂಸ್ಥೆ ಯ ಒಬ್ಬ ಟ್ರಸ್ಟಿ ಎಂದರೆ ಸರಿ. ಟ್ರಸ್ಟ್ ನ ಯಾವುದೇ ಆಡಳಿತಾತ್ಮಕ ಕೆಲಸ ಕಾರ್ಯಗಳನ್ನು ಮಾಡುವ ಬಗ್ಗೆ ಮ್ಯಾನೇಜಿಂಗ್ ಟ್ರಸ್ಟಿ ಮುಖಾಂತರ ನಿರ್ದೇಶನ ಆಗ ಬೇಕು ಎಂದರೆ ಸರಿಯಲ್ಲ. ಸದರಿ ವಿಧ್ಯಾ ಸಂಸ್ಥೆಯ ಟ್ರಸ್ಟ್ ನ ಬೈಲಾ ಇದೆಯೋ ಇಲ್ಲವೊ ಗೊತ್ತಿಲ್ಲ. ಟ್ರಸ್ಟ್ ಡೀಡ್ ಪ್ರಕಾರ ಆಡಳಿತಾತ್ಮಕ ಕೆಲಸಗಳನ್ನು ಧರ್ಮದರ್ಶಿಯವರು ಮಾಡಬೇಕು ಎಂದು ಇದೆ. ಈ ರೀತಿ ಟ್ರಸ್ಟ್ ಡೀಡ್ ನಲ್ಲಿ ನಮೂದು ಇದಿಯಾ ಎಂದರೆ ಸಾಕ್ಷಿಯು ನಮೂದು ಇದೆ ಎಂದು ನುಡಿಯುತ್ತಾರೆ. ಟ್ರಸ್ಟ್ ಡೀಡ್ ನಲ್ಲಿ ಮ್ಯಾನೇಜಿಂಗ್ ಟ್ರಸ್ಟೀ ಏನೇನು ಕೆಲಸ ಮಾಡಬೇಕು ಎಂದು ನಮೂದು ಇರುವುದಿಲ್ಲ.

ಬೈಲಕುಪ್ಪೆ ಪೊಲೀಸ್ ರವರು ನನಗೆ ಮಿಳಂದ ವಿಧ್ಯಾಸಂಸ್ಥೆಯ ಹಣಕಾಸಿನ ಆಡಿಟ್ ನ ಬಗ್ಗೆ ಮಾಹಿತಿ ಕೊಡಲು ಕೇಳಿದ್ದರು. ನಾನು ಪೊಲೀಸರಿಗೆ *1995* ರಿಂದ *2005* ವರೆಗೆ ಮಾಹಿತಿ ಕೊಡಬೇಕಾಗಿತ್ತು. ನಾನು ಕೊಟ್ಟಿರುವ ಮಾಹಿತಿಯಲ್ಲಿ ಸುಳ್ಳು ಅಂಶವನ್ನು ಬರೆದಿಲ್ಲ. ನಾನು ಕೊಟ್ಟಿರುವ ಮಾಹಿತಿಯಲ್ಲಿ ಆರೋಪಿ ಹಣ ದುರುಪಯೋಗ ಮಾಡಿಕೊಂಡಿರುವ ಬಗ್ಗೆ ಹೇಳಿರುತ್ತೇನೆ. ಸದರಿ ವಿಷಯವನ್ನು ನಿ.ಪಿ.*45* ರ ಕೊನೆಯ ಪುಟದಲ್ಲಿ ನಮೂದು ಮಾಡಿದ್ದೇನೆ. ನಿವೃತ್ತ ನ್ಯಾಯಾಧೀಶರ ವರದಿ ಮತ್ತು ಟ್ರಸ್ಟ್ ಕಮಿಟಿ ಮೀಟಿಂಗ್ ಆಧಾರದ ಮೇಲೆ ನಾನು ನಿ.ಪಿ. *45* ರಲ್ಲಿ ಸದರಿ ವಿಷಯ ನಮೂದು

ಮಾಡಿದ್ದೇನೆ ಎಂದರೆ ಸರಿ. ಹಣ ದುರುಪಯೋಗದ ಬಗ್ಗೆ ಬರುವ ಪೂರ್ವದಲ್ಲಿ ಸದರಿ ವ್ಯಕ್ತಿಗೆ ಜವಾಬ್ದಾರಿ ವಹಿಸಿರಬೇಕು ಎಂದರೆ ಸರಿ.

ನೊಂದಾಯಿತ ಸಂಸ್ಥೆಗಳಲ್ಲಿ ಠರಾವು ಮೂಲಕವೇ ಜವಾಬ್ದಾರಿಯನ್ನು ವಹಿಸಿಕೊಡುತ್ತಾರೆ ಎಂದರೆ ಸಾಕ್ಷಿಯು ಅದು ಸರಿಯಾದ ಕ್ರಮವಾಗಿರುತ್ತದೆ ಎಂದು ನುಡಿಯುತ್ತಾರೆ. ಆರೋಪಿಗೆ ಹಣಕಾಸಿನ ಜವಾಬ್ದಾರಿಯನ್ನು ವಹಿಸಿರುವ ಬಗ್ಗೆ ಮಾಡಿರುವ ಠರಾವನ್ನು ನಾನು ಗಮನಿಸಿಲ್ಲ. ಆರೋಪಿ ಮಿಳಂದ ವಿಧ್ಯಾಸಂಸ್ಥೆಯ ಹಣಕಾಸಿನ ವ್ಯವಹಾರ ಮಾಡಿರುವ ಬಗ್ಗೆ ಆತ ಸಹಿ ಮಾಡಿರುವ ಯಾವುದೇ ದಾಖಲೆಯನ್ನು ನಾನು ನೋಡಿಲ್ಲ. ಸಾಕ್ಷಿಯು ಮುಂದುವರೆದು ಲೆಕ್ಕ ಪರಿಶೋಧನೆಗೆ ಎಲ್ಲಾ ದಾಖಲೆಗಳನ್ನು ಆರೋಪಿಯೇ ನನಗೆ ಕೊಟ್ಟಿರುತ್ತಾರೆ ಎನ್ನುತ್ತಾರೆ. ಆರೋಪಿಯೇ ಎಲ್ಲಾ ದಾಖಲೆಗಳನ್ನು ನನಗೆ ಕೊಟ್ಟ ಬಗ್ಗೆ ನನ್ನ ವರದಿಯಲ್ಲಿ ಉಲ್ಲೇಖ ಮಾಡಿಲ್ಲ. ಆತನೇ ಎಲ್ಲಾ ದಾಖಲೆಗಳನ್ನು ನನಗೆ ಕೊಡಬೇಕು ಎಂದು ಟ್ರಸ್ಟ್‌ನಲ್ಲಿ ಠರಾವು ಆಗಿರುವ ಬಗ್ಗೆ ದಾಖಲೆ ನೋಡಿಲ್ಲ.

ಆರೋಪಿ ನಮ್ಮ ಸಂಸ್ಥೆಗೆ ಮಿಳಂದ ವಿಧ್ಯಾಸಂಸ್ಥೆಯ ಆಡಿಟಿಂಗ್ ಮಾಡಲು ಕೋರಿರುವ ಬಗ್ಗೆ ಯಾವುದೂ ಲಿಖಿತ ದಾಖಲೆ ಇರುವುದಿಲ್ಲ. ಟ್ರಸ್ಟ್ ಹೆಸರಿನಲ್ಲಿ ಬ್ಯಾಂಕ್ ಖಾತೆ ತೆರೆದು ಅದನ್ನು ಮ್ಯಾನೇಜಿಂಗ್ ಟ್ರಸ್ಟಿ ಗೋವಿಂದಯ್ಯ ನಿರ್ವಹಣೆ ಮಾಡುತ್ತಿದ್ದರು ಎಂದರೆ ಸರಿ. ನಾನು ಆಡಿಟಿಂಗ್ ಮಾಡುವ ಸಮಯದಲ್ಲಿ ಬ್ಯಾಂಕ್ ಖಾತೆ ಟ್ರಸ್ಟ್‌ಹೆಸರಿನಲ್ಲಿದ್ದು ಅದನ್ನು ಮ್ಯಾನೇಜಿಂಗ್ ಟ್ರಸ್ಟೀ ಗೋವಿಂದಯ್ಯ ವ್ಯವಹರಿಸುತ್ತಿದ್ದರು ಎಂದರೆ ಸರಿ. ಆ ಸಮಯದಲ್ಲಿ ನಾನು ಗೋವಿಂದಯ್ಯ ರವರ ಬಳಿ ಬ್ಯಾಂಕಿನ ವ್ಯವಹಾರ ಬಗ್ಗೆ ಕೇಳುವ ಅವಕಾಶ ಇತ್ತು ಎಂದರೆ ಸರಿ. ಅವರಿಗೆ ಬ್ಯಾಂಕ್ ಖಾತೆಯ ಪಾಸ್ ಪುಸ್ತಕ ಕೇಳಿರುತ್ತೇನೆ. ಸದರಿ ಪಾಸ್ ಪುಸ್ತಕ ನೋಡದೇ ಆಡಿಟಿಂಗ್ ರಿಪೋರ್ಟ್ ಕೊಡಲು ಸಾಧ್ಯವೇ ಇಲ್ಲ ಎಂದರೆ ಸರಿ. ನಿ.ಪಿ.45 ರ 2 ನೇ ಪುಟದಲ್ಲಿ ಬಾಂಕ್ ಅಕೌಂಟ್ ನಾಟ್ ಅವ್ಯೆಲೇಬಲ್ ಎಂದು ನಮೂದು ಇದೆ ಎಂದರೆ ಸರಿ. ಸದರಿ ವಿಷಯವನ್ನು ನಾನೇ ನಮೂದು ಮಾಡಿದ್ದೇನೆ ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ.ಸರಿ. ಇದೆ.**

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**

ಪಿರಿಯಾಪಟ್ಟಣ.